ಕೃಷಿ ಸಾಲ ಮನ್ನಾ ಕುರಿತು.

991- ಡಾ: ಎ.ಬಿ. ಮಾಲಕರೆಡ್ಡಿ (ಯಾದಗಿರಿ) : ಮಾನ್ಯ ಸಹಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕೃಷಿ ಸಾಲವನ್ನು ಮನ್ನಾ ಮಾಡುವ ಕಾರ್ಯಕ್ರಮವನ್ನು ಸರ್ಕಾರದವರು ಹಾಕಿಕೊಂಡಿರುವರೆ?

ಆ) ಹಾಗಿದ್ದಲ್ಲಿ ಅದಕ್ಕೆ ತಗಲುವ ವೆಚ್ಚವೆಷ್ಟು?

ಇ) ಈ ಯೋಜನೆ ಉಪಯೋಗ ಪಡೆಯುವ ಫಲಾನುಭವಿಗಳ ಸಂಖ್ಯೆ ಎಷ್ಟು?

ಈ) ಈ ಫಲಾನುಭವಿಗಳಲ್ಲಿ ಸಣ್ಣ ಮತ್ತು ದೊಡ್ಡ ರೈತರ ಸಂಖ್ಯೆ ಎಷ್ಟು?

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರಿ ಸಚಿವರು):

ಅ) ಇಲ್ಲಾ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಬೆಂಗಳೂರು ನಗರದಲ್ಲಿ ಸಂಚರಿಸುವ ನಗರ ಸಾರಿಗೆ ವಾಹನಗಳು

1394-ಶ್ರೀ ಎಂ. ಶ್ರೀನಿವಾಸ್ (ಉತ್ತರಹಳ್ಳಿ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಸಂಚರಿಸುವ ನಗರ ಸಾರಿಗೆ ವಾಹನಗಳ ಸಂಖ್ಯೆ ಎಷ್ಟು;

ಆ) ಹೊಗೆ ಉಗಳದೇ ಸಂಚರಿಸುವ ಹಾಗೂ ಸುಸ್ಥಿತಿಯಲ್ಲಿರುವ ವಾಹನಗಳೆಷ್ಟು?

ಇ) ಬೆಂಗಳೂರು ನಗರ ಸಾರಿಗೆಯ ಒಟ್ಟು ಸುತ್ತುವಳಿಗಳೆಷ್ಟು?

ಶ್ರೀ ಕೆ. ಎಸ್. ಬೀಳಗಿ (ಸಾರಿಗೆ ಸಚಿವರು):

ಅ) 1,864

ಆ) ಬೆಂಗಳೂರು ನಗರ ಸಾರಿಗೆ ವಿಭಾಗದ ವಾಹನಗಳಲ್ಲಿ ಪ್ರಸ್ತುತವಾಗಿ ನಿಗದಿತ ಮಿತಿಗಿಂತ ಹೆಚ್ಚಿಗೆ ಹೊಗೆ ಉಗುಳುವ ವಾಹನಗಳು ಇರುವುದಿಲ್ಲ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ರಾಜ್ಯ ಸಾರಿಗೆ ಪ್ರಾಧಿಕಾರದಿಂದ ಅಧಿಕೃತ ಅನುಮತಿ ಪಡೆದಿರುವ ಹೊಗೆ ಪರೀಕ್ಷಕ ಯಂತ್ರವನ್ನು ಪಡೆದಿದ್ದು, ನಿಗದಿತ ಮಿತಿಗಿಂತ ಹೆಚ್ಚು ಹೊಗೆ ಉಗುಳುವ ವಾಹನಗಳಲ್ಲಿರುವ ಯಂತ್ರದ ತೊಂದರೆಯನ್ನು ಸರಿಪಡಿಸುತ್ತದೆ. ಅವಶ್ಯಕತೆ ಇದ್ದಲ್ಲಿ ಯಂತ್ರವನ್ನೇ ಬದಲಾಯಿಸುವ ರೂಢಿ ಇಟ್ಟುಕೊಂಡಿದೆ.

ಇ) 30,358.